ಧಾರಾವಾಹಿ

# ಬನ್ನಿ, ಬೇಲೂರು ಮಠಕ್ಕೆ

ಸ್ವಾಮಿ ಆಶುತೋಷಾನಂದ

*(ಮೇ ೨೦೧೦ರ ಸಂಚಿಕೆಯಿಂದ)*




**ಶ್ರೀಮಾತೆಯವರ ಮಂದಿರ**

ಈಗ ನಾವು ಶ್ರೀಮಾತೆಯವರ ಮಂದಿರಕ್ಕೆ ಬಂದಿದ್ದೇವೆ. ಅನುಗ್ರಹದಾತೆಯಾದ ನಮ್ಮ ಶ್ರೀಮಾತೆಯವರು ಒಂದು ಸುಂದರವಾದ ವೇದಿಕೆಯ ಮೇಲೆ ತಮ್ಮೆಲ್ಲ ವೈಭವದಿಂದ, ಗಂಗೆಯನ್ನು ವೀಕ್ಷಿಸುತ್ತ, ಕುಳಿತುಕೊಂಡಿದ್ದಾರೆ. ಗಂಗೆಯನ್ನು ಅವರು ದಿವ್ಯಮಾತೆಯೆಂದು ಆರಾಧಿಸುತ್ತಿದ್ದರು. ಅವರ ಚಿತ್ರಪಟದ ಪಕ್ಕದಲ್ಲಿಯೇ ಶ್ರೀರಾಮಕೃಷ್ಣರ ಒಂದು ಸಣ್ಣ ಚಿತ್ರಪಟವನ್ನೂ ಇಡಲಾಗಿದೆ. ಇದನ್ನು ಶ್ರೀಮಾತೆಯವರಿಗೆ ಗೋಪಾಲೇರ್ ಮಾ ನೀಡಿದ್ದಳು. ಗೋಪಾಲೇರ್ ಮಾ ಶ್ರೀರಾಮಕೃಷ್ಣರ ಒಬ್ಬ ಭಕ್ತೆ. ಅವಳು ತನ್ನ ಆಧ್ಯಾತ್ಮಿಕ ಸಿದ್ಧಿಗಳಿಗಾಗಿ ಪ್ರಸಿದ್ಧಳಾಗಿದ್ದಾಳೆ. ಶ್ರೀಮಾತೆಯವರ ಎಡಭಾಗದಲ್ಲಿ ಬಾಣೇಶ್ವರ ಶಿವಲಿಂಗವಿದೆ. ಬಾಗಿಲಿನ ಮೇಲೆ ಒಂದು ಸಣ್ಣ ಗೂಡಿನಲ್ಲಿ ದುರ್ಗಾದೇವಿಯ ಕಲ್ಲಿನ ಚಿಕ್ಕ ಮೂರ್ತಿಯನ್ನು ಕಾಣಬಹುದು.

ಸ್ವಾಮಿ ವಿವೇಕಾನಂದರ ಪ್ರಕಾರ, ಶ್ರೀಮಾತೆಯವರು ಜಗತ್ತಿನಲ್ಲಿ ಶಕ್ತಿಯ ಆವಾಹನೆಯನ್ನು ಮಾಡಲು ಜನ್ಮತಾಳಿದರು. ಅವರು ಹೇಳುತ್ತಾರೆ: "ನೀವು ಶ್ರೀಮಾತೆಯವರ ಜೀವನದ ಅದ್ಭುತ ಮಹತ್ವವನ್ನು ಇನ್ನೂ ಅರಿತಿಲ್ಲ; ನೀವ್ಯಾರೂ ಅರಿತಿಲ್ಲ. ಆದರೆ ಅದನ್ನು ನೀವು ನಿಧಾನವಾಗಿ ಅರಿತುಕೊಳ್ಳುವಿರಿ. ಶಕ್ತಿಯಿಲ್ಲದೆಯೇ ಈ ಜಗತ್ತಿನ ಪುನರುದ್ಧಾರವಾಗಲಾರದು. ನಮ್ಮ ದೇಶವು ಅತ್ಯಂತ ಹಿಂದುಳಿದ ಮತ್ತು ದುರ್ಬಲ ದೇಶವಾಗಿರುವುದಕ್ಕೆ ಕಾರಣವೇನು? ಏಕೆಂದರೆ ಶಕ್ತಿಯನ್ನು ಅಗೌರವದಿಂದ ಕಾಣಲಾಗುತ್ತಿದೆ. ಶ್ರೀಮಾತೆಯವರು ಆ ಅದ್ಭುತ ಶಕ್ತಿತತ್ತ್ವವನ್ನು ಪುನರುಜ್ಜೀವನಗೊಳಿಸಲು ಅವತರಿಸಿ ಬಂದಿದ್ದಾರೆ ಹಾಗೂ ಅವರನ್ನು ಕೇಂದ್ರವಾಗಿ ಇಟ್ಟುಕೊಂಡು ಮತ್ತೊಮ್ಮೆ ಗಾರ್ಗಿ, ಮೈತ್ರೇಯಿಯರು ಈ ಜಗತ್ತಿನಲ್ಲಿ ಹುಟ್ಟಿಬರುವರು. ಪ್ರಿಯ ಸಹೋದರನೇ, ನೀನಿದನ್ನು ಅಲ್ಪವಷ್ಟೇ ಅರಿತಿರುವೆ. ಆದರೆ ಕ್ರಮೇಣ ಇವೆಲ್ಲವನ್ನೂ ತಿಳಿದುಕೊಳ್ಳುತ್ತೀಯೆ." ಶ್ರೀಮಾತೆಯವರ ದೇಗುಲವು ಅವರ ಪವಿತ್ರ ಶರೀರವನ್ನು ದಹನ ಮಾಡಿದ ಸ್ಥಳದಲ್ಲಿಯೇ ಸ್ಥಾಪಿತವಾಗಿರುವುದು. ಹಾಗೆಂದೇ ಇದು ಒಂದು ಶಕ್ತಿಪೀಠವಾಗಿದೆ. ಶಕ್ತಿಪೀಠವೆಂದರೆ ಜಗನ್ಮಾತೆಯ ನಿವಾಸಸ್ಥಾನ ಎಂದರ್ಥ.

ಶ್ರೀಮಾತೆಯವರ ದೇಹತ್ಯಾಗದ ಬಳಿಕ, ಚಿತಾಗ್ನಿಯನ್ನು ಹೊತ್ತಿಸಲು ಅನೇಕ ಸ್ಥಳಗಳನ್ನು ಸೂಚಿಸಲಾಯಿತು. ಸ್ವಾಮಿ ಶಾರದಾನಂದರು ಈ ಸ್ಥಳವನ್ನೇ ಆಯ್ಕೆಮಾಡಿ ಹೀಗೆ ನುಡಿದರು: "ಶ್ರೀಮಾತೆಯವರು ಗಂಗೆಗೆ ಮುಖಮಾಡಿ ಕುಳಿತುಕೊಂಡಿರುತ್ತಾರೆ ಮತ್ತು ಇಡೀ ಮಾನವಕುಲಕ್ಕೆ ಚಿರಂತನ ಶಾಂತಿಯನ್ನು ಪ್ರವಹಿಸುತ್ತಿರುತ್ತಾರೆ." ಶ್ರೀರಾಮಕೃಷ್ಣರ ಮತ್ತೊಬ್ಬ ಶಿಷ್ಯರಾದ ಸ್ವಾಮಿ ತುರೀಯಾನಂದರು ಕೂಡ, ದೇವಾಲಯವು ಗಂಗೆಗೆ ಅಭಿಮುಖವಾಗಿದ್ದರೆ, ವೈಭವಯುತವಾಗಿ ಕಂಗೊಳಿಸುವುದು ಎಂದು ಅಭಿಪ್ರಾಯಪಟ್ಟರು. ಅದೇ ಪ್ರಕಾರ ಈ ದೇವಾಲಯವನ್ನು ಕಟ್ಟಲಾಯಿತು. ಬೇಲೂರು ಮಠದ ದೇವಸ್ಥಾನಗಳ ಪೈಕಿ ಶ್ರೀಮಾತೆಯವರ ಮಂದಿರ ಮಾತ್ರವೇ ಗಂಗೆಗೆ ಅಭಿಮುಖವಾಗಿ ಇರುವುದು.

'ಶ್ರೀರಾಮಕೃಷ್ಣ ವಚನವೇದ' ದ ಕರ್ತೃವಾದ ಮಹೇಂದ್ರನಾಥ ಗುಪ್ತರು ಒಂದು ಆಶ್ಚರ್ಯಕರವಾದ ಘಟನೆಯನ್ನು ದಾಖಲಿಸಿದ್ದಾರೆ: ಶ್ರೀಮಾತೆಯವರ ದೇಹತ್ಯಾಗದಿಂದ ಉಂಟಾದ ದುಃಖವನ್ನು ತಡೆಯಲಾರದೆ ಇದ್ದಾಗ, ಅವರಿಗೊಂದು ಕನಸಾಯಿತು. ಅದನ್ನು ಅವರು ತಮ್ಮ ಮಾತುಗಳಲ್ಲಿಯೇ ಹೀಗೆ ವಿವರಿಸುತ್ತಾರೆ: "ಅವತ್ತಿನ ದಿವಸ ಶ್ರೀಮಾತೆಯವರು ನನ್ನ ಕನಸಿನಲ್ಲಿ ಕಾಣಿಸಿಕೊಂಡು ಹೀಗೆ ಹೇಳಿದರು: 'ನಾನು ಮರಣಹೊಂದಿದೆ ಎಂದು ಏನನ್ನು ನೀನು ಕಂಡೆಯೋ ಅದು ಬರಿ ಭ್ರಮೆ. ಇಲ್ಲಿ ನೋಡು. ನಾನು ಅದೇ ರೂಪದಲ್ಲಿ ಇದ್ದೇನೆ.' " ಸ್ವಾಮಿ ಶಿವಾನಂದರು ಒಮ್ಮೆ ಹೀಗೆ ಹೇಳಿದರು: "ಶ್ರೀಮಾತೆಯವರು ಸಾಕ್ಷಾತ್ ಜಗನ್ಮಾತೆಯೇ ಆಗಿದ್ದಾರೆ. ಆದ್ದರಿಂದ ಅವರು ಇಲ್ಲಿ ಎಂದೆಂದಿಗೂ ನಿವಾಸ ಮಾಡುತ್ತಾರೆ."

ಈ ಮಂದಿರದ ಶಂಕುಸ್ಥಾಪನೆಯನ್ನು ೧೯೨೦, ಡಿಸೆಂಬರ್ ೩೧ ರಂದು ಮಾಡಲಾಯಿತು. ಅದು ಶ್ರೀಮಾತೆಯವರು ದೇಹತ್ಯಾಗ ಮಾಡಿದ ವರ್ಷದಲ್ಲಿ ಬರುವ ಅವರ ಪುಣ್ಯಜಯಂತಿಯ ದಿನವೇ ಆಗಿತ್ತು. ಶ್ರೀಮಾತೆಯವರ ಹೃದಯಕ್ಕೆ ಯಾವತ್ತೂ ಬಹಳ ಹತ್ತಿರದವರಾಗಿದ್ದ ಸ್ವಾಮಿ ಶಾರದಾನಂದಜಿ ಅವರ ಎಡೆಬಿಡದ

ಶ್ರಮದಿಂದ ಈ ಮಂದಿರವು ಅದರ ಮುಂದಿನ ವರ್ಷವೇ ಸಂಪೂರ್ಣವಾಯಿತು. ೧೯೨೧ರ ಡಿಸೆಂಬರ್ ೨೧ರಂದು ಅಂದರೆ ಶ್ರೀಮಾತೆಯವರ ೬೮ನೇ ಜನ್ಮತಿಥಿಯಂದು ಸ್ವಾಮಿ ಶಾರದಾನಂದಜಿ ಅವರೇ ಇದರ ಲೋಕಾರ್ಪಣೆಯನ್ನೂ ಮಾಡಿದರು.

ಈಗ ನಾವು ದಕ್ಷಿಣ ದಿಕ್ಕಿನೆಡೆಗೆ, ಸ್ವಾಮಿ ವಿವೇಕಾನಂದರ ಮಂದಿರದ ಕಡೆಗೆ ಮುಂದುವರಿಯೋಣ. ಮಾರ್ಗಮಧ್ಯದಲ್ಲಿ ನಮ್ಮ ಬಲಭಾಗಕ್ಕೆ ಮೂರು ದೇವದಾರು ವೃಕ್ಷಗಳು ಕಾಣಸಿಗುತ್ತವೆ. ಅವು ಈ ಭೂಮಿಯನ್ನು ಕೊಂಡುಕೊಂಡಾಗಿನಿಂದಲೂ ಇದ್ದ ಮರಗಳು. ಅಂದರೆ ಸುಮಾರು ೧೦೦ ವರ್ಷಗಳಿಗಿಂತಲೂ ಹೆಚ್ಚು ವಯಸ್ಸಾಗಿರುವಂಥವು!

ನೈಋತ್ಯ ದಿಕ್ಕಿನಲ್ಲಿರುವ, ದೋಣಿಗಳು ಹೋಗಿಬರುವ ಜೆಟ್ಟಿಯ ಕಡೆಗೆ ಇರುವ (ಇದನ್ನು ಲಾಂಚ್ ಘಾಟ್ ಎಂದು ಕರೆಯುತ್ತಾರೆ) ಗೇಟ್, ಸ್ವಾಮೀಜಿಯವರ ಕಾಲದಲ್ಲಿ ಮುಖ್ಯದ್ವಾರವಾಗಿ ಉಪಯೋಗಿಸಲ್ಪಡುತ್ತಿತ್ತು. ಸ್ವಾಮೀಜಿ, ೧೯೦೦ರ ಡಿಸೆಂಬರ್ ೯ರಂದು, ಪಾಶ್ಚಾತ್ಯ ದೇಶಗಳ ತಮ್ಮ ಎರಡನೆಯ ಪ್ರಯಾಣವನ್ನು ಮುಗಿಸಿಕೊಂಡು ಹಿಂದಿರುಗುವಾಗ, ಇದೇ ಗೇಟನ್ನೇ (ಆಗ ಅದು ಇನ್ನೂ ಚಿಕ್ಕದಾಗಿತ್ತು) ಹಾರಿಕೊಂಡು ಒಳಬಂದಿದ್ದರು. ಶ್ರೀಮಾತೆಯವರು ತಮ್ಮ ದಕ್ಷಿಣಭಾರತದ ತೀರ್ಥಯಾತ್ರೆಯನ್ನು ಮುಗಿಸಿಕೊಂಡು, ೧೯೧೧ರಲ್ಲಿ ಮಠಕ್ಕೆ ಭೇಟಿಕೊಟ್ಟಾಗ, ಇಲ್ಲಿಯೇ ಅವರಿಗೆ ಅದ್ದೂರಿ ಸ್ವಾಗತವನ್ನು ನೀಡಲಾಗಿತ್ತು.

## ಸ್ವಾಮಿ ವಿವೇಕಾನಂದ ಮಂದಿರ



ಸ್ವಾಮಿ ವಿವೇಕಾನಂದ ಮಂದಿರ

ಸ್ವಾಮಿ ವಿವೇಕಾನಂದರ ಮಂದಿರಕ್ಕೆ ಎರಡು ಅಂತಸ್ತುಗಳಿವೆ. ಮೇಲುಗಡೆಯ ಅಂತಸ್ತಿನಲ್ಲಿ ಬಂಗಾಳಿ ಅಕ್ಷರದಲ್ಲಿ ಓಂಕಾರ ಚಿಹ್ನೆಯಿರುವ ಅಮೃತಶಿಲೆಯ ಪ್ರತೀಕವಿದೆ. ನೆಲದ ಅಂತಸ್ತಿನಲ್ಲಿ ಸ್ವಾಮಿ ವಿವೇಕಾನಂದರ ಅಮೃತಶಿಲೆಯ ಉಬ್ಬುಚಿತ್ರವಿದೆ (Relief). ಈ ಮಂದಿರದ ನೆಲವು ಭೂಮಿಯ ಹಂತಕ್ಕಿಂತ


ಓಂಕಾರ ಪ್ರತೀಕ

ಕೆಳಗಿದೆ. ಈ ಮಂದಿರವನ್ನು ಕಟ್ಟಿದಾಗ, ಈ ಭೂಭಾಗವು ಅತ್ಯಂತ ಕೆಳಮಟ್ಟದಲ್ಲಿದ್ದುದೇ ಇದಕ್ಕೆ ಕಾರಣ.

ಸ್ವಾಮಿ ವಿವೇಕಾನಂದರ ಪಾರ್ಥಿವ ಶರೀರವನ್ನು ದಹನ ಮಾಡಿದ ಸ್ಥಳದಲ್ಲಿಯೇ ಈ ಮಂದಿರವು ನಿಂತಿದೆ. ಈ ಜಾಗ ವನ್ನು ಸ್ವಾಮೀಜಿಯೇ ಆಯ್ಕೆ ಮಾಡಿಕೊಂಡರು. ಅವರ ಜೀವನಚರಿತ್ರೆಯಲ್ಲಿ ಹೀಗೆ ದಾಖಲಾಗಿದೆ: "ಅವರ ಮರಣಕ್ಕೆ ಮೂರು ದಿವಸಗಳ ಮುಂಚೆ, ಸ್ವಾಮೀಜಿ ಮಠದ ವಿಸ್ತಾರವಾದ ಹುಲ್ಲುಗಾವಲಿನ ಮೇಲೆ ಅತ್ತಿಂದಿತ್ತ ಅಡ್ಡಾಡುತ್ತಿದ್ದರು. ಅವರ ಜೊತೆ ಸ್ವಾಮಿ ಪ್ರೇಮಾನಂದರೂ ಇದ್ದರು. ಆಗ ಗಂಗಾತಟದ ಒಂದು ನಿರ್ದಿಷ್ಟ ಸ್ಥಳವನ್ನು ತಮ್ಮ ಈ ಸೋದರ ಸಂನ್ಯಾಸಿಗೆ ಗುರುತು ಮಾಡಿ ತೋರಿಸಿದ ಸ್ವಾಮೀಜಿ ಗಂಭೀರ ಧ್ವನಿಯಿಂದ ಹೀಗೆ ಹೇಳಿದರು: "ನಾನು ನನ್ನ ದೇಹತ್ಯಾಗ ಮಾಡಿದಾಗ, ಇಲ್ಲಿಯೇ ದಹನ ಮಾಡು." ಸ್ವಾಮೀಜಿ ೧೯೦೨ರ ಜುಲೈ ೪ ರಂದು ಮಹಾಸಮಾಧಿ ಹೊಂದಿದರು. ಅವರ ಸ್ಮರಣೆಗಾಗಿ, ಈ ದೇವಾಲಯವು ಅದೇ ಸ್ಥಳದಲ್ಲಿಯೇ ನಿರ್ಮಾಣಗೊಂಡಿತು.

ಆಶ್ಚರ್ಯವೋ ಎಂಬಂತೆ ಸ್ವಾಮಿ ವಿವೇಕಾನಂದರ ಮಂದಿರದ ನಿರ್ಮಾಣವು ಬಹಳ ಕಾಲ ಅಂದರೆ ೨೧ ವರ್ಷಗಳಿಗೂ ಹೆಚ್ಚು ಕಾಲ ತೆಗೆದುಕೊಂಡಿತು. ಇದಕ್ಕೆ ಕಾರಣ ಹಣದ ಅಭಾವ. ಭಾರತದಾದ್ಯಂತ, ವಿದೇಶಗಳಲ್ಲಿಯೂ ಎಷ್ಟೇ ಸವಿನಯ ಪ್ರಾರ್ಥನೆ ಮಾಡಿಕೊಂಡರೂ ಉಪಯೋಗವಾಗಲಿಲ್ಲ. ಇದರ ನಿರ್ಮಾಣ ಕಾರ್ಯವನ್ನು ೧೯೦೭ರ ಜನವರಿ ತಿಂಗಳಿನಷ್ಟು ತಡವಾಗಿ, ಅಂದರೆ ಸ್ವಾಮೀಜಿ ದೇಹತ್ಯಾಗ ಮಾಡಿದ ಐದು ವರ್ಷಗಳ ನಂತರವಷ್ಟೇ ಕೈಗೆತ್ತಿಕೊಳ್ಳಲಾಯಿತು. ಆದರೂ ಇದರ ಪ್ರಗತಿ ಅತ್ಯಂತ ನಿಧಾನವಾಗಿ ಸಾಗಿತ್ತು. ಕೊನೆಗೂ, ೧೯೦೯ರ ಜನವರಿಯಲ್ಲಿ, ಸ್ವಾಮಿ ವಿವೇಕಾನಂದರ ಹುಟ್ಟುಹಬ್ಬದಂದು ದೇಗುಲದ ನಿರ್ಮಾಣ ಕಾರ್ಯ ಇನ್ನೂ ಅಸಂಪೂರ್ಣವಾಗಿದ್ದರೂ, ಅವರ ದೊಡ್ಡ ಚಿತ್ರವೊಂದನ್ನು ದೇವಾಲಯದಲ್ಲಿ ಇಟ್ಟು, ಸುಂದರವಾಗಿ ಅಲಂಕರಿಸಲಾಯಿತು. (ಮುಂದುವರಿಯುವುದು)